Ex.No. 2/2018 RW3

ಸಾಕ್ಷಿಗೆ ದಿನಾಂಕಃ **24.07.2024** ರಂದು ಪ್ರಮಾಣವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಃಡಿ ಹೆಚ್ ಆರ್ ಪರಃ ಶ್ರೀ. ಕೆ ಎಸ್ ಎಸ್ ವಕೀಲರಿಂದ ಃ

ಹಾವೇರಿಯಲ್ಲಿ ನಗರಸಭೆಯಲ್ಲಿ ರೆವಿನ್ಯೂ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ. ನಾನು ಈ ಹಿಂದೆ ನ ರಾ ಪುರದಲ್ಲಿ ಪಟ್ಟಣ ಪಂಚಾಯ್ತಿಯಲ್ಲಿ ರೆವಿನ್ಯೂ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ನಾನು ಪಿ ಯು ಸಿ ವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಸರ್ವೆ ಮಾಡುವ ಬಗ್ಗೆ ವಿಶೇಷ ತರಬೇತಿ ಹೊಂದಿರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ನಮಗೆ ತರಬೇತಿ ನೀಡಿರುತ್ತಾರೆ ಮತ್ತು ಅದರ ಬಗ್ಗೆ ಜ್ಞಾನ ಇರುತ್ತದೆ ಎಂದು ನುಡಿಯುತ್ತಾರೆ.

ನನಗೆ ಈ ದಿನ ನ್ಯಾಯಾಲಯಕ್ಕೆ ಹಾಜರಾಗಲು ಸಾಕ್ಷ್ಯ ನುಡಿಯಲು ನೋಟೀಸು ಬಂದಿರುವುದಿಲ್ಲ ಎಂದರೆ ಸರಿ. ನನಗೆ ಈ ದಿನ ನ್ಯಾಯಾಲಯಕ್ಕೆ ಹಾಜರಾಗಲು ಚಂದ್ರಶೇಖರ್ ವಕೀಲರು ತಿಳಿಸಿರುತ್ತಾರೆ.

ಪಟ್ಟಣ ಪಂಚಾಯ್ತಿಯಲ್ಲಿ ಯಾವುದೇ ಕಟ್ಟಡ ಕಾಮಗಾರಿ ಮಾಡಬೇಕಾದರೆ ಕಟ್ಟಡ ಪರವಾನಗಿ ಪಡೆಯಬೇಕು ಎಂದರೆ ಸರಿ. ಆ ರೀತಿ ಪರವಾನಗಿಯನ್ನು ಜೆ ಡಿ ಆರ್ ಪಡೆದಿರುವುದಿಲ್ಲ ಎಂದರೆ ಸರಿ. ನನಗೆ ಶೆಡ್ಯೂಲ್ ಸ್ವತ್ತನ್ನು ಅಳತೆ ಮಾಡಲು ಯಲ್ಲಮ್ಮ ನೀಡಿರುವ ಅರ್ಜಿ ನ್ಯಾಯಾಲಯದ ಮುಂದೆ ಇರುವುದಿಲ್ಲ ಎಂದರೆ ಸರಿ. ಸದರಿ ಸಮಯದಲ್ಲಿ ಆಶಾ ರವರು ಪಟ್ಟಣ ಪಂಚಾಯ್ತಿ ಸದಸ್ಯರಾಗಿರುತ್ತಾರೆಂದರೆ ಸರಿ. ಸದರಿ ಆಶಾರವರ ಗಂಡ ಶ್ರೀನಾಥ್ ಎಂದರೆ ಸರಿ. ಸದರಿ ಶ್ರೀನಾಥ್ ಹಾಗೂ ಆಶಾರವರಿಗೆ ಜೆ ಡಿ ಆರ್ ರವರಿಗೆ ಸಂಬಂಧಿಕರಾಗಬೇಕು ಎಂದರೆ ಸರಿ.

Ex.No. 2/2018 RW3

ಆಜುಬಾಜುದಾರರಿಗೆ ಸರ್ವೆ ಮಾಡುವ ಸಮಯದಲ್ಲಿ ನೋಟೀಸನ್ನು ನಾನಾಗೇ ನೀಡಿರುತ್ತೇನೆ. ಸದರಿ ನೋಟೀಸು ನ್ಯಾಯಾಲಯದಲ್ಲಿ ಇರುವುದಿಲ್ಲ ಎಂದರೆ ಸರಿ. ಸರ್ವೆ ಮಾಡುವ ಸ್ಥಳಕ್ಕೆ ನಾವು ಎಷ್ಟು ಜನ ಹೋಗಿರುತ್ತೇವೆ ಎಂದು ಮಹಜರಿನಲ್ಲಿ ತೋರಿಸಿರುವುದಿಲ್ಲ ಎಂದರೆ ಸರಿ. ನನ್ನ ವರದಿಯಲ್ಲಿ ಡಿ ಹೆಚ್ ಆರ್ ರವರ ಸಹಿ ಇರುವುದಿಲ್ಲ ಎಂದರೆ ಸರಿ. ಸಾಕ್ಷಿ ಮುಂದುವರೆದು ಅವರು ಸ್ಥಳದಲ್ಲಿ ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿ ಪುನಃ ಮುಂದುವರೆದು ಅವರ ಮಗ ಸಹಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ಡಿ ಹೆಚ್ ಆರ್ ಸ್ಥಳದಲ್ಲಿ ಇರಲಿಲ್ಲ,ಅವರು ಸಹಿ ಮಾಡಲು ನಿರಾಕರಿಸಿರುತ್ತಾರೆ ಎಂದು ಎಲ್ಲೂ ನಮೂದು ಮಾಡಿರುವುದಿಲ್ಲ ಎಂದರೆ ಸರಿ. ನಾನು ಆಶಾ ಹಾಗೂ ಜೆ ಡಿ ಆರ್ ರವರ ಮಾತು ಕೇಳಿಕೊಂಡು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ನಿಶಾನೆ ಆರ್ 7 ಸೃಷ್ಟಿಮಾಡಿರುತ್ತೇನೆಂದರೆ ಸರಿಯಲ್ಲ.

ಃಃ ಮರು ವಿಚಾರಣೆ ಇಲ್ಲಃಃ

**(ದಿನಾಂಕಃ 24.07.2024 ರಂದು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸ ಇ ಎ ಒ

ಪ್ರ.ದ.ನ್ಯಾದಂಃ ನ.ರಾ.ಪುರ.

ಸಾಕ್ಷಿ ಸಹಿಃ